ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2171
ಸದಸ್ಯರ ಹೆಸರು : ಶ್ರೀ ಎಂ. ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 18-03-2022
ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕೃಷಿ ಇಲಾಖೆ ವತಿಯಿಂದ ಕೈಗೊಳ್ಳುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳು ಯಾವುವು; ಫಲಾನುಭವಿ ಆಯ್ಕೆಗೆ ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಕೃಷಿ ಇಲಾಖಾ ವತಿಯಿಂದ ಕೈಗೊಳ್ಳುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳು ಹಾಗೂ ಆಯ್ಕೆಗೆ ಇರುವ ಮಾನದಂಡಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕೇಂದ್ರ ಪುರಸ್ಕೃತ "ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ ಯೋಜನೆ"ಗೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ; 1. ಒಂದು ಕುಟುಂಬಕ್ಕೆ 2 ಹೆಕ್ಟೇರ್ ಕ್ಷೇತ್ರಕ್ಕೆ ಗರಿಷ್ಠ ರೂ.1.00 ಲಕ್ಷಗಳ ಸಹಾಯಧನ ಮೀರದಂತೆ ಅನುಷ್ಠಾನ ಮಾಡಲಾಗುತ್ತಿದೆ. 2. ಗುಚ್ಛ ಗ್ರಾಮ ಆಧಾರದ ಮೇಲೆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆ. 3. ಮಾರ್ಗಸೂಚಿಯನ್ವಯ ಪರಿಶಿಷ್ಟ ಜಾತಿ ಉಪಯೋಜನೆಯಡಿ ಶೇ.16 ರಷ್ಟು ಮತ್ತು ಗಿರಿಜನ ಉಪ ಯೋಜನೆಯಡಿ ಶೇ.8 ರಷ್ಟು ನಿಗಧಿಪಡಿಸಿ ಅನುಷ್ಠಾನ ಮಾಡಲಾಗುತ್ತಿದೆ. 4. ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಯನ್ವಯ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತಿದೆ.
ಆ)	ಕೃಷಿ ಸಂಜೀವಿನಿ ಯೋಜನೆಯಡಿಯಲ್ಲಿ ಸರ್ಕಾರದಿಂದ ನೀಡುವ ಯೋಜನೆಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು)	ಕೃಷಿ ಬೆಳೆಗಳಲ್ಲಿನ ಕೀಟ, ರೋಗ, ಕಳೆ ಬಾಧೆ ನಿರ್ವಹಣೆ, ಸಸ್ಯ ಪೋಷಕಾಂಶಗಳ ಕೊರತೆ, ಮಣ್ಣು ಆರೋಗ್ಯ ಮತ್ತಿತರೆ ತಾಂತ್ರಿಕ ಸಲಹೆಗಳನ್ನು ಕ್ಷೇತ್ರ ಮಟ್ಟದಲ್ಲಿ ರೈತರಿಗೆ ಒದಗಿಸುವ ನಿಟ್ಟಿನಲ್ಲಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಸ್ಥಾಪನೆಯನ್ನು ಮಾಡಲಾಗಿರುತ್ತದೆ. ಸದರಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳಿಗೆ "ಕೃಷಿ ಸಂಜೀವಿನಿ" ಎಂದು ನಾಮಕರಣ ಮಾಡಲಾಗಿದ್ದು, ಸದರಿ ಕಾರ್ಯಕ್ರಮದಡಿ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿರುವುದಿಲ್ಲ.

ಇ	ಈ ಯೋಜನೆಗಳಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ವೆಚ್ಚ ಹಾಗೂ ಫಲಾನುಭವಿಗಳೆಷ್ಟು; (ಯೋಜನೆವಾರು/ತಾಲ್ಲೂಕುವಾರು ಮಾಹಿತಿ ನೀಡುವುದು)	ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಸ್ಥಾಪನೆ ಹಾಗೂ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ, ವೆಚ್ಚ ಹಾಗೂ ಫಲಾನುಭವಿಗಳ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಈ	ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಕೃಷಿಯಿಂದ ಆರ್ಥಿಕ ತೊಂದರೆಗೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರುಗಳ ವಿವರ ಹಾಗೂ ಇವರುಗಳಿಗೆ ಸರ್ಕಾರದಿಂದ ದೊರಕಿರುವ ಪರಿಹಾರವೆಷ್ಟು; (ಮಾಹಿತಿ ಒದಗಿಸುವುದು)	ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರುಗಳ ಹಾಗೂ ನೀಡಿರುವ ಪರಿಹಾರಗಳ ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ.
ಉ	ಕೃಷಿ ಇಲಾಖೆಯಿಂದ ಯಾವ ಯಾವ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಲಾಗಿದೆ; ಎಷ್ಟು ಬೆಂಬಲ ಬೆಲೆ ನಿಗಧಿಪಡಿಸಲಾಗಿದೆ? (ವಿವರ ನೀಡುವುದು)	ಕೇಂದ್ರ ಸರ್ಕಾರದ ಕೃಷಿ ಹಾಗೂ ರೈತರ ಕಲ್ಯಾಣ ಮಂತ್ರಾಲಯವು ಪ್ರತಿ ವರ್ಷ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಪೂರ್ವದಲ್ಲಿ ಕೃಷಿ ಉತ್ಪನ್ನಗಳಿಗೆ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ (Commission on Agriculture Costs and Prices (CACP)) ಶಿಫಾರಸ್ಸಿನನ್ವಯ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸುತ್ತದೆ. 2021-22ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆಗಳಿಗೆ ಘೋಷಿಸಿರುವ ಬೆಂಬಲ ಬೆಲೆ ವಿವರಗಳನ್ನು ಅನುಬಂಧ-4ರಲ್ಲಿ ಒದಗಿಸಲಾಗಿದೆ.
ಊ	ರೈತ ಸಂಜೀವಿನಿ ಯೋಜನೆಯ ಉದ್ದೇಶವೇನು? (ಸಂಪೂರ್ಣ ಮಾಹಿತಿ ನೀಡುವುದು)	ಅನ್ವಯಿಸುವುದಿಲ್ಲ

AGRI-AML/87/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

LCQ 2171ರ ಅನುಬಂಧ-1

ಕೃಷಿ ಇಲಾಖಾ ವತಿಯಿಂದ ಕೈಗೊಳ್ಳುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳು ಹಾಗೂ ಆಯ್ಕೆಗೆ ಅನುಸರಿಸಲಾಗುತ್ತಿರುವ ಮಾನದಂಡಗಳ ವಿವರಗಳು

ಕ್ರ. ಸಂ	ಫಲಾನುಭವಿ ಆಧಾರಿತ ಯೋಜನೆ/ ಕಾರ್ಯಕ್ರಮ	ಅನುಷ್ಠಾನಗೊಳಿಸಲು ಆಯ್ಕೆ ವಿಧಾನ / ಮಾನದಂಡ
1.	ಬಿತ್ತನೆ ಬೀಜಗಳ ಪೂರೈಕೆ	ಕೃಷಿ ಇಲಾಖೆಯ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ (ಸಾಮಾನ್ಯ ರೈತರಿಗೆ ಶೇ 50ರ ವರೆಗೆ ಹಾಗು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.75 ರ ವರೆಗೆ) ಒಟ್ಟಾರೆ ಗರಿಷ್ಠ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ (Actual holding) ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಮಾತ್ರ ರಿಯಾಯಿತಿಯಲ್ಲಿ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆ. ಬಿತ್ತನೆ ಬೀಜ ವಿತರಣೆಯಲ್ಲಿ ರೈತರ ಪಹಣಿಯಲ್ಲಿನ ವಿವರಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಪರಿಶಿಷ್ಟ ವರ್ಗಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ರೈತರು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುತ್ತದೆ. ರೈತರು Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number(FID) ಪಡೆದಿರಬೇಕು.
2.	ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ	ಈ ಯೋಜನೆಯಡಿ ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಾಗೂ ಇತರೆ ಬೆಳೆಗಳನ್ನು ಹೋಬಳಿ ಮಟ್ಟದಲ್ಲಿ ಪ್ರಥಮವಾಗಿ ಅಧಿಸೂಚಿಸಲಾಗುತ್ತದೆ. ಅಂತಿಮ ದಿನಾಂಕದೊಳಗೆ ರೈತರಿಂದ ಪ್ರೀಮಿಯಂ ಪಡೆದು ಬ್ಯಾಂಕ್ / ಸಹಕಾರ ಸಂಸ್ಥೆ / ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆ ನೋಂದಣಿ ಕಾರ್ಯ ಕೈಗೊಳ್ಳಲಾಗುತ್ತದೆ ದಾಖಲೆಗಳನ್ನು ಪರಿಶೀಲಿಸಿ ಅರ್ಹ ರೈತರ ಪ್ರಸ್ತಾವನೆಗಳನ್ನು ಸಂಬಂಧಿಸಿದ ವಿಮಾ ಸಂಸ್ಥೆಗಳಿಗೆ ಅಂಗೀಕರಿಸಲು ರವಾನಿಸಲಾಗುತ್ತದೆ. ಈ ಯೋಜನೆಯು ಸಾಲ ಪಡೆದಂತಹ ರೈತರಿಗೆ ಕಡ್ಡಾಯವಾಗಿದ್ದು, ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿರುತ್ತದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ಕ್ಷೇತ್ರಾಧಾರಿತ ಹಾಗೂ ಇಳುವರಿ ಆಧಾರಿತ ಯೋಜನೆಯಾಗಿದ್ದು, ಮಾರ್ಗಸೂಚಿಯನುಸಾರ ಹೋಬಳಿ / ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ನೀಡುವ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ ಕೊರತೆಗನುಗುಣವಾಗಿ ಹೋಬಳಿ/ ಗ್ರಾಮ ಪಂಚಾಯಿತಿಯಲ್ಲಿ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗುತ್ತಾರೆ. ಅರ್ಹ ರೈತರಿಗೆ ವಿಮೆ ಪರಿಹಾರ ಮೊತ್ತವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವಿಮಾ ಸಂಸ್ಥೆಯವರು ವರ್ಗಾಯಿಸುತ್ತಾರೆ.

3.	ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (PMKISAN)	ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ. ಸದರಿ ಸಹಾಯವನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು. ಇದರ ಜೊತೆಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ರೂ.4000/-ಗಳನ್ನು ಎರಡು ಕಂತುಗಳಲ್ಲಿ ನೀಡಲಾಗುವುದು. ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಘೋಷಣೆಯ ಆಧಾರದಲ್ಲಿ ಕೆಳಕಂಡ ಮಾನದಂಡಗಳನ್ನು ಹೊಂದಿರುವ ರೈತ ಕುಟುಂಬವು ಯೋಜನೆಯ ಫಲಾನುಭವಿಯಾಗಲು ಅರ್ಹರಿರುವುದಿಲ್ಲ i. ಭೂಮಿ ಹೊಂದಿರುವ ಸಂಘ ಅಥವಾ ಸಂಸ್ಥೆಗಳು. ii. ಕೆಳಕಾಣಿಸಿದ ವರ್ಗಗಳಲ್ಲಿ ಕುಟುಂಬ ಸದಸ್ಯರು ಇದ್ದಲ್ಲಿ. a) ಮಾಜಿ ಮತ್ತು ಹಾಲಿ ಸಾಂವಿಧಾನಿಕ ಹುದ್ದೆಗಳು b) ಮಾಜಿ ಮತ್ತು ಹಾಲಿ ಸಚಿವರು/ರಾಜ್ಯ ಸಚಿವರು / ರಾಜ್ಯ ವಿಧಾನ ಸಭೆ / ವಿಧಾನ ಪರಿಷತ್ತಿನ ಸದಸ್ಯರು / ನಗರ ಸಭೆ ಅಧ್ಯಕ್ಷರು/ ಪುರ ಸಭೆ ಅಧ್ಯಕ್ಷರು /ಜಿಲ್ಲಾ ಪಂಚಾಯಿತಿ ಅಧ್ಯಕ್ಷರು c) ನಿವೃತ್ತ / ಹಾಲಿ ಸೇವೆಯಲ್ಲಿರುವಕೇಂದ್ರ / ರಾಜ್ಯ ಸರ್ಕಾರಗಳ /ಸಚಿವಾಲಯ ಕಛೇರಿ/ಇಲಾಖೆ, ಕ್ಷೇತ್ರ ಕಛೇರಿಗಳು/ ಕೇಂದ್ರ / ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಅಂಗ ಸಂಸ್ಥೆಗಳು / ಸ್ವಾಯತ್ತ ಸಂಸ್ಥೆಗಳು ಅಧಿಕಾರಿಗಳು ಹಾಗೂ ನೌಕರರು/ ಸ್ಥಳೀಯ ಸಂಸ್ಥೆಗಳ ಖಾಯಂ ನೌಕರರು (ಗ್ರೂಪ್-ಡಿ /-4ನೇ ವರ್ಗ /-Multi-Testing Staff ಹೊರತುಪಡಿಸಿ) d) ರೂ.10,000/- ಅಥವಾ ಹೆಚ್ಚಿನ ಮೊತ್ತ ಪಡೆಯುತ್ತಿರುವ ವಯೋ ನಿವೃತ್ತ / ನಿವೃತ್ತ ಪಿಂಚಣಿದಾರರು. (ಗ್ರೂಪ್-ಡಿ / 4ನೇ ವರ್ಗ / Multi Testing Staff ಹೊರತುಪಡಿಸಿ) e) ಕಳೆದ ಸಾಲಿನ ಆದಾಯ ತೆರಿಗೆ ಪಾವತಿದಾರರು. ವೈದ್ಯ, ಅಭಿಯಂತರ, ವಕೀಲ, ಲೆಕ್ಕ ಪರಿಶೋಧಕರು, ವಾಸ್ತುಶಿಲ್ಪದಂತಹ ವೃತ್ತಿ ಪರರು ಮತ್ತು ವೃತ್ತಿ ಪರ ಸಂಸ್ಥೆಯಲ್ಲಿ ನೊಂದಾಯಿತ ಸದರಿ ವೃತ್ತಿಯನ್ನು ಕೈಗೊಳ್ಳುತ್ತಿರುವವರು.
4.	ಸಾವಯವ ಕೃಷಿ	ಹಿಂದಿನ ಸಾವಯವ ಭಾಗ್ಯ ಯೋಜನೆ ಗುಂಪುಗಳ ಪ್ರಮಾಣೀಕರಣ- ಕರ್ನಾಟಕ ರಾಜ್ಯ ಬೀಜ & ಸಾವಯವ ಪ್ರಮಾಣೀಕರಣ ಸಂಸ್ಥೆಯ ಮೂಲಕ ಕಾರ್ಯನಿರತ ಗುಂಪುಗಳ ಕ್ಷೇತ್ರದ ಪ್ರಮಾಣೀಕರಣ 2013-14 ರಚಿತವಾದ ಕಾರ್ಯನಿರತ ಗುಂಪುಗಳ ಅರ್ಹರಾಗಿರುತ್ತವೆ.
5.	ರೈತ ಸಿರಿ	ಸಿರಿಧಾನ್ಯಗಳಾದ ನವಣೆ, ಹಾರಕ, ಸಾಮೆ, ಕೊರಲೆ, ಊದಲು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10,000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹಧನ. ರಾಜ್ಯಾದಾದ್ಯಂತ ಸಿರಿಧಾನ್ಯಗಳಾದ ನವಣೆ, ಹಾರಕ, ಸಾಮೆ, ಕೊರಲೆ, ಊದಲು ಬೆಳೆಗಳನ್ನು ಬೆಳೆದ ರೈತರು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಿ ನೋಂದಣಿಯಾಗಬೇಕು

6.	ಸೂಕ್ಷ್ಮ ನೀರಾವರಿ	ಹನಿ / ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ 2.00 ಹೆಕ್ಟೇರ್ ಪ್ರದೇಶದವರೆಗೆ ಶೇ.90 ರಷ್ಟು ಸಹಾಯಧನ ಒದಗಿಸಲಾಗುತ್ತಿದೆ. ಇದಕ್ಕಾಗಿ Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number (FID) ಪಡೆಯಬೇಕು. ನೀರಾವರಿ ಸೌಲಭ್ಯ ಹೊಂದಿರುವ ರೈತರು ನಿಗದಿತ ಅರ್ಜಿ ನಮೂನೆಯಲ್ಲಿ ಆರ್.ಟಿ.ಸಿ. (ಪಹಣಿ) ಯೊಂದಿಗೆ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬೇಕು ಹಾಗೂ ಕೆ-ಕಿಸಾನ್‌ನಲ್ಲಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡಬೇಕು. ರೈತರು ಜೇಷ್ಠತೆ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇರೆಗೆ ದಾಖಲಾತಿಗಳನ್ನು ಸಲ್ಲಿಸಿದ ರೈತರಿಗೆ ವಿತರಿಸಿದ / ರೈತರ ಹೊಲದಲ್ಲಿ ಅನುಷ್ಠಾನ ಮಾಡಿದ ಲಘು ನೀರಾವರಿ ಸಲಕರಣೆಗಳಿಗೆ ಸಹಾಯಧನ ಒದಗಿಸಲಾಗುವುದು.
7.	ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆ	ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ನಾಟಿ / ಬಿತ್ತನೆ ಉಪಕರಣಗಳು, ಟ್ರ್ಯಾಕ್ಟರ್ / ಶಕ್ತಿಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಕೊಯಿಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು ಕೃಷಿ ಸಂಸ್ಕರಣಾ ಘಟಕಗಳು ಹಾಗೂ ಡೀಸಲ್ ಪಂಪ್ ಸೆಟ್‌ಗಳನ್ನು ರಿಯಾಯಿತಿ ದರದಲ್ಲಿ ಈ ಕೆಳಕಂಡಂತೆ ಒದಗಿಸಲಾಗುತ್ತಿದೆ. 1. ಕೃಷಿ ಯಂತ್ರೋಪಕರಣ/ ಕೃಷಿ ಸಂಸ್ಕರಣಾ ಘಟಕ/ ಟಾರ್ಪಾಲೀನ್‌ಗಳಿಗೆ ಸಂಬಂಧಿಸಿದಂತೆ ಪ್ರತಿ ರೈತ ಫಲಾನುಭವಿಗಳಿಗೆ (Individual farmers) ಸಾಮಾನ್ಯ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ರೂ. ಒಂದು ಲಕ್ಷದವರೆಗೆ ನೀಡಲಾಗುತ್ತಿದೆ. ಸಣ್ಣ ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತದೆ. 2. ಕೃಷಿ ಯಂತ್ರೋಪಕರಣಗಳ ದರವು 0 ರಿಂದ 5 ಲಕ್ಷವಿದ್ದಲ್ಲಿ ಅಂತಹ ಉಪಕರಣಗಳನ್ನು ಕಾನೂನಿನ್ವಯ ನೊಂದಾಯಿತ ರೈತ ಗುಂಪುಗಳಿಗೆ (FPOs / SHGs / Registered farmer organizatrions / Clubs) ನೀಡಲಾಗುವುದು. ಇದಕ್ಕಾಗಿ Farmer Registration and Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number (FID) ಪಡೆಯಬೇಕು. ರೈತರು ನಿಗದಿತ ಅರ್ಜಿ ನಮೂನೆಯಲ್ಲಿ ಆರ್.ಟಿ.ಸಿ. ಯೊಂದಿಗೆ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬೇಕು ಹಾಗೂ ಕೆ-ಕಿಸಾನ್ ನಲ್ಲಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಜೇಷ್ಠತೆ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇರೆಗೆ ದಾಖಲಾತಿಗಳನ್ನು ಸಲ್ಲಿಸಿದ ರೈತರು, ಪಡೆದ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುವುದು.

8.	ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ (ಭತ್ತ ಮತ್ತು ದ್ವಿದಳ ಧಾನ್ಯ)	• ಭತ್ತ & ದ್ವಿದಳ ಧಾನ್ಯ ಬೆಳೆಯಲ್ಲಿ ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳು. • ಶೇ.50ರ ರಿಯಾಯಿತಿಯಲ್ಲಿ ಗುಣಮಟ್ಟದ ಬಿತ್ತನೆ ಬೀಜ ವಿತರಣೆ. • ಶೇ.50ರ ರಿಯಾಯಿತಿಯಲ್ಲಿ ಕೃಷಿ ಪರಿಕರಗಳಾದ ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜೈವಿಕ ಗೊಬ್ಬರಗಳು, ಲಘು ಪೋಷಕಾಂಶಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳು & ಕೃಷಿ ಯಂತ್ರೋಪಕರಣಗಳು. • ದ್ವಿದಳಧಾನ್ಯ ಬೆಳೆಗಳಲ್ಲಿ ದೃಢೀಕೃತ ಬಿತ್ತನೆ ಬೀಜೋತ್ಪಾದನೆಗೆ ಪ್ರತಿ ಕ್ವಿಂಟಾಲ್‌ಗೆ ರೂ.5000/-ದಂತೆ ಪ್ರೋತ್ಸಾಹಧನ ಎಲ್ಲಾ ವರ್ಗದ ರೈತರು ನಿಗದಿತ ಅರ್ಜಿ ನಮೂನೆ ಮತ್ತು ಆರ್.ಟಿ.ಸಿ ಸಲ್ಲಿಸಿ ಸವಲತ್ತು ಪಡೆಯಬಹುದು
9.	ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ- ಒರಟುಧಾನ್ಯಗಳು (ಮೆಕ್ಕೆಜೋಳ)	ಮೆಕ್ಕೆಜೋಳ ಬೆಳೆಯಲ್ಲಿ ದ್ವಿದಳ ಧಾನ್ಯಗಳ ಬೆಳೆಗಳನ್ನು ಅಂತರಬೆಳೆಗಳಾಗಿ ಪ್ರಾತ್ಯಕ್ಷಿಕೆಗಳು ಎಲ್ಲಾ ವರ್ಗದ ರೈತರು ನಿಗದಿತ ಅರ್ಜಿ ನಮೂನೆ ಮತ್ತು ಆರ್.ಟಿ.ಸಿ ಸಲ್ಲಿಸಿ ಸವಲತ್ತು ಪಡೆಯಬಹುದು.
10.	ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ನ್ಯೂಟ್ರೀ ಸೀರಿಯಲ್ಸ್ -ರಾಗಿ, ಜೋಳ, ಸಜ್ಜೆ, ನವಣೆ ಇತ್ಯಾದಿ ಕಿರುಧಾನ್ಯ)	• ರಾಗಿ.ಜೋಳ, ಸಜ್ಜೆ, ನವಣೆ ಇತ್ಯಾದಿ ಕಿರುಧಾನ್ಯಗಳ ಬೆಳೆಯಲ್ಲಿ ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳು. • ಶೇ.50ರ ರಿಯಾಯಿತಿಯಲ್ಲಿ ಗುಣಮಟ್ಟದ ಬಿತ್ತನೆ ಬೀಜ ವಿತರಣೆ. • ಶೇ.50ರ ರಿಯಾಯಿತಿಯಲ್ಲಿ ಕೃಷಿ ಪರಿಕರಗಳಾದ: ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಲಘು ಪೋಷಕಾಂಶಗಳು, ಜಿಪ್ಸಂ/ ಕೃಷಿಸುಣ್ಣ, ಕೃಷಿ ಉಪಕರಣಗಳು ಮತ್ತು ಕೃಷಿ ಯಂತ್ರೋಪಕರಣಗಳು. • ನ್ಯೂಟ್ರಿ ಸಿರಿಧಾನ್ಯ ಬೆಳೆಗಳಲ್ಲಿ ದೃಢೀಕೃತ ಬಿತ್ತನೆ ಬೀಜೋತ್ಪಾದನೆಗೆ ಪ್ರತಿ ಕ್ವಿಂಟಾಲ್‌ಗೆ ರೂ.3000/-ದಂತೆ ಪ್ರೋತ್ಸಾಹಧನ ಎಲ್ಲಾ ವರ್ಗದ ರೈತರು ನಿಗದಿತ ಅರ್ಜಿ ನಮೂನೆ ಮತ್ತು ಆರ್.ಟಿ.ಸಿ ಸಲ್ಲಿಸಿ ಸವಲತ್ತು ಪಡೆಯಬಹುದು.
11.	ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ -ಎಣ್ಣೆಕಾಳು ಮತ್ತು ತಾಳೆಬೆಳೆಗಳು (ಎನ್.ಎಫ್. ಎಸ್.ಎಂ- ಎಣ್ಣೆಕಾಳು)	• ಶೇ. 50ರಷ್ಟು ರಿಯಾಯಿತಿ ದರದಲ್ಲಿ ಪ್ರಮಾಣಿತ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮ • ಎಣ್ಣೆಕಾಳು ಬೆಳೆಯಲ್ಲಿ ಆಧುನಿಕ ತಾಂತ್ರಿಕತೆಗಳ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳು. • ಶೇ.50ರ ರಿಯಾಯಿತಿಯಲ್ಲಿ ಕೃಷಿ ಪರಿಕರಗಳಾದ: ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕAಗಳು, ಲಘು ಪೋಷಕಾಂಶಗಳು ಮತ್ತು ಜಿಪ್ಸಂ/ಕೃಷಿ ಸುಣ್ಣ ಎಲ್ಲಾ ವರ್ಗದ ರೈತರು ನಿಗದಿತ ಅರ್ಜಿ ನಮೂನೆ ಮತ್ತು ಆರ್.ಟಿ.ಸಿ ಸಲ್ಲಿಸಿ ಸವಲತ್ತು ಪಡೆಯಬಹುದು.
12.	ಸಸ್ಯ ಸಂರಕ್ಷಣೆ	ಶೇ.50 ರ ರಿಯಾಯಿತಿಯಲ್ಲಿ ಸಸ್ಯ ಸಂರಕ್ಷಣಾ ರಾಸಾಯನಿಕಗಳು/ದಾಸ್ತಾನು ಕಣಜಗಳು ಹಾಗೂ ಉಪಕರಣಗಳ ವಿತರಣೆ. ಎಲ್ಲಾ ವರ್ಗದ ರೈತರು ನಿಗದಿತ ಅರ್ಜಿ ನಮೂನೆ ಮತ್ತು ಆರ್.ಟಿ.ಸಿ ಸಲ್ಲಿಸಿ ಸವಲತ್ತು ಪಡೆಯಬಹುದು.

13.	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ	ಹಸಿರೆಲೆ ಗೊಬ್ಬರ, ಜಿಪ್ಸಂ, ಕೃಷಿ ಸುಣ್ಣ / ಡೋಲೋಮೈಟ್, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಎರೆಹುಳು ಗೊಬ್ಬರ, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ, ಸಿಟಿ ಕಾಂಪೋಸ್ಟ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ಬಯೋಡೈಜೆಸ್ಟರ್ ಘಟಕ ಮತ್ತು ಎರೆಹುಳು ಗೊಬ್ಬರ ಉತ್ಪಾದನಾ ಘಟಕ ಸ್ಥಾಪನೆಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ಅರ್ಹತೆ: • ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. • ರೈತರ ಹಿಡುವಳಿ ಭೂಮಿಯನ್ನು ಅವರ ಪಹಣಿಯಿಂದ ಖಾತರಿಪಡಿಸಬೇಕು. • ತಂದೆ ಅಥವಾ ತಾಯಿ ಮರಣ ಹೊಂದಿದ್ದಲ್ಲಿ ಗ್ರಾಮ ಲೆಕ್ಕಿಗರಿಂದ ದೃಡೀಕರಣ ಪಡೆದಿರಬೇಕು. • ಪರಿಶಿಷ್ಟ ಪಂಗಡ ವರ್ಗದವರು ಗುರುತಿನ ಚೀಟಿಯ ಜೊತೆಗೆ ಜಾತಿ ಪ್ರಮಾಣ ಪತ್ರವನ್ನು ಪ್ರಸ್ತುತ ಪಡಿಸುವುದು.
14.	ಕೃಷಿ ವಿಸ್ತರಣಾ ಉಪ ಅಭಿಯಾನ (SAME-ATMA)	ಯೋಜನೆಯಡಿ ಆಯೋಜಿಸುವ ವಿಸ್ತರಣಾ ಕಾರ್ಯಕ್ರಮಗಳಲ್ಲಿ ಎಲ್ಲಾ ವರ್ಗದ ರೈತರು / ರೈತ ಮಹಿಳೆಯರ ಪಾಲ್ಗೊಳ್ಳುವಿಕೆ ಅವಕಾಶವಿರುತ್ತದೆ
15.	ಮಣ್ಣಿನ ಫಲವತ್ತತೆ ಯೋಜನೆ	ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ್ವಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ಶೇ. 50ರ ರಿಯಾಯಿತಿ ದರದಲ್ಲಿ ರಸಗೊಬ್ಬರ / ಸಾವಯವ ಗೊಬ್ಬರ / ಜೈವಿಕ ಗೊಬ್ಬರ / ಲಘುಪೋಷಕಾಂಶ/ ಮಣ್ಣು ಸುಧಾರಕಗಳನ್ನು ಗರಿಷ್ಟ ರೂ.2500/- ಪ್ರತಿ ಹೆಕ್ಟೇರ್‌ಗೆ ಮಾತ್ರ ವಿತರಿಸಲಾಗುತ್ತಿದೆ. ಮಾದರಿ ಗ್ರಾಮಗಳಲ್ಲಿ ಪ್ರಾತ್ಯಕ್ಷಿಕೆ ಕೈಗೊಳ್ಳಲು ಆಸಕ್ತಿ ಹೊಂದಿರುವ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ/ ಸಣ್ಣ /ಅತಿಸಣ್ಣ/ ಪರಿಶಿಷ್ಟ ಪಂಗಡ / ಪರಿಶಿಷ್ಟ ಜಾತಿ ಇತರೇ ಹಿಂದುಳಿದ ಸಮುದಾಯ ಹಾಗೂ ರೈತ ಮಹಿಳೆಯರಿಗೆ ಆದ್ಯತೆ ನೀಡುವುದು. ಮಣ್ಣು ಆರೋಗ್ಯ ಚೀಟಿ ಹೊಂದಿರಬೇಕು.
		ಗ್ರಾಮ ಮಟ್ಟದ ಮಣ್ಣು ಪರೀಕ್ಷಾ ಘಟಕ ಸ್ಥಾಪಿಸಲು ಯೋಜನಾ ವೆಚ ರೂ.5.00 ಲಕ್ಷಗಳಲ್ಲಿ ಶೇ.75 ರಷ್ಟು ರೂ.3.75 ಲಕ್ಷಗಳನ್ನು ಸಹಾಯಧನವನ್ನಾಗಿ ನೀಡಲಾಗುವುದು. • ಕೃಷಿ ಕ್ಲಿನಿಕ್ ಮತ್ತು ಕೃಷಿ ವ್ಯಾಪಾರ ಕೇಂದ್ರಗಳು (Agri Clinics & Agri Business Centres) ಕೃಷಿ ಉದ್ದಿಮೆದಾರರು, ಮಾಜಿ ಯೋಧರು, ಸ್ವಸಹಾಯ ಸಂಘಗಳು, ರೈತರ ಉತ್ಪಾದಕರ ಸಂಸ್ಥೆಗಳು (FPO), ರೈತ ಉತ್ಪನ್ನ ಕಂಪನಿಗಳು, ರೈತರ ಜಂಟಿ ಜವಾಬ್ದಾರಿ ಗುಂಪುಗಳು (Farmer Joint Liability Groups), ರೈತರ ಸಹಕಾರ ಸಂಘಗಳು, PACs, ಪರಿಕರಗಳ ರಿಟೇಲ್ ಔಟ್‌ಲೆಟ್‌ಗಳು, ಪರಿಕರಗಳ ರಿಟೇಲ್‌ದಾರರು, ಶಾಲೆಗಳು / ಕಾಲೇಜುಗಳನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡುವುದು. • ಫಲಾನುಭವಿಗಳು ಕನಿಷ್ಠ ಪಕ್ಷ ಮೆಟ್ರಿಕ್ ನಲ್ಲಿ 2ನೇ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು. ವಿಜ್ಞಾನ ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರಬೇಕು.

		• ಅರ್ಜಿದಾರರು ಅರ್ಜಿಗಳನ್ನು ಅಗತ್ಯ ಶೈಕ್ಷಣಿಕ ಅರ್ಹತೆ, PAN ಸಂಖ್ಯೆ ಮತ್ತು ಆಧಾರ್ ಸಂಖ್ಯೆಯ ದಾಖಲಾತಿಗಳನ್ನು ಜಂಟಿ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಯಲ್ಲಿ ಅನುಮೋದನೆಯಾಗಿರಬೇಕು.
		ಲಘುಪೋಷಕಾಂಶಗಳ ವಿತರಣೆ- ಶೇ.50ರ ರಿಯಾಯಿತಿ ಗರಿಷ್ಠ ರೂ.500/- ಮೀರದಂತೆ ಎಲ್ಲಾ ವರ್ಗದ ರೈತರಿಗೆ. ನಿಗದಿತ ಅರ್ಜಿ ನಮೂನೆ ಮತ್ತು RTC ಸಲ್ಲಿಸಬೇಕು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ/ ಸಣ್ಣ /ಅತಿಸಣ್ಣ/ ಪರಿಶಿಷ್ಟ ಪಂಗಡ / ಪರಿಶಿಷ್ಟ ಜಾತಿ ಇತರೇ ಹಿಂದುಳಿದ ಸಮುದಾಯ ಹಾಗೂ ರೈತ ಮಹಿಳೆಯರಿಗೆ ಆದ್ಯತೆ

ಕೃಷಿ ನಿರ್ದೇಶಕರು

LCQ 2171ರ ಅನುಬಂಧ-2

ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಗಳ ಸ್ಥಾಪನೆ ಹಾಗು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ, ವೆಚ್ಚ ಹಾಗೂ ಫಲಾನುಭವಿಗಳ ಸಂಖ್ಯೆಯ ವಿವರ

ವರ್ಷ	ಜಿಲ್ಲೆ	ತಾಲ್ಲೂಕು	ಬಿಡುಗಡೆ (ಲಕ್ಷ)	ವೆಚ್ಚ (ಲಕ್ಷ)	ಫಲಾನುಭವಿ ಸಂಖ್ಯೆ
2020-21	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	10.69	10.6838	73
		ಚಿಂತಾಮಣಿ			129
		ಬಾಗೇಪಲ್ಲಿ			15
		ಗುಡಿಬಂಡೆ			35
2021-22	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	1.96	1.47442	255
		ಚಿಂತಾಮಣಿ			-
		ಬಾಗೇಪಲ್ಲಿ			46
		ಗುಡಿಬಂಡೆ			59
2020-21	ಕೋಲಾರ	ಕೋಲಾರ	11	10.94414	12
		ಮಾಲೂರು			15
		ಬಂಗಾರಪೇಟೆ			24
		ಮುಳಬಾಗಿಲು			20
		ಶ್ರೀನಿವಾಸಪುರ			25
2021-22	ಕೋಲಾರ	ಕೋಲಾರ	1.96	1.65	104
		ಮಾಲೂರು			110
		ಬಂಗಾರಪೇಟೆ			138
		ಮುಳಬಾಗಿಲು			188
		ಶ್ರೀನಿವಾಸಪುರ			170

ಕೃಷಿ ನಿರ್ದೇಶಕರು

LCQ 2171 ಅನುಬಂಧ 3

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ವರದಿಯಾದ ರೈತರ ಆತ್ಮಹತ್ಯೆ ವಿವರ

ಕೋಲಾರ ಜಿಲ್ಲೆ

ಕ್ರ. ಸಂ	ವರ್ಷ	ವರದಿಯಾದ ಪ್ರಕರಣಗಳು	ತಿರಸ್ಕೃತ ಪ್ರಕರಣಗಳು	ಅರ್ಹ ಪ್ರಕರಣಗಳು	ಪರಿಹಾರ ವಿತರಿಸಿರುವ ಪ್ರಕರಣಗಳು	ಪರಿಹಾರ ವಿತರಿಸಲು ಬಾಕಿ ಇರುವ ಪ್ರಕರಣಗಳು	ತೀರ್ಮಾನಿಸಲು ಬಾಕಿ ಇರುವ ಪ್ರಕರಣಗಳು	ಎಫ್.ಎಸ್.ಎಲ್ ವರದಿಗಾಗಿ	ಇತರೆ ದಾಖಲಾತಿಗಾಗಿ	ಷರಾ
1	2018-19	6	1	5	5	0	0	0	0	ಉಪವಿಭಾಗ ಮಟ್ಟದ ಸಮಿತಿಯಲ್ಲಿ ತೀರ್ಮಾನವಾಗುವ ಪ್ರತಿ ಅರ್ಹ ಪ್ರಕರಣಕ್ಕೆ ರೂ.5.00 ಲಕ್ಷ ಪರಿಹಾರಧನವನ್ನು ವಿತರಿಸಲಾಗುತ್ತಿದ್ದು, 2020-21 ನೇ ಸಾಲಿನಿಂದ ರೈತ ಆತ್ಮಹತ್ಯೆ ಪ್ರಕರಣಗಳಿಗೆ ಪರಿಹಾರ ನೀಡುವ ಕಾರ್ಯಕ್ರಮವು ಕಂದಾಯ ಇಲಾಖೆಗೆ ವರ್ಗಾವಣೆಗೊಂಡಿರುತ್ತದೆ.
2	2019-20	4	0	4	3	1	0	0	0	
3	2020-21	3	0	3	0	3	0	0	0	
4	**ಒಟ್ಟು**	**13**	**1**	**12**	**8**	**4**	**0**	**0**	**0**	

ಚಿಕ್ಕಬಳ್ಳಾಪುರ

ಕ್ರ. ಸಂ	ವರ್ಷ	ವರದಿಯಾದ ಪ್ರಕರಣಗಳು	ತಿರಸ್ಕೃತ ಪ್ರಕರಣಗಳು	ಅರ್ಹ ಪ್ರಕರಣಗಳು	ಪರಿಹಾರ ವಿತರಿಸಿರುವ ಪ್ರಕರಣಗಳು	ಪರಿಹಾರ ವಿತರಿಸಲು ಬಾಕಿ ಇರುವ ಪ್ರಕರಣಗಳು	ತೀರ್ಮಾನಿಸಲು ಬಾಕಿ ಇರುವ ಪ್ರಕರಣಗಳು	ಎಫ್.ಎಸ್.ಎಲ್ ವರದಿಗಾಗಿ	ಇತರೆ ದಾಖಲಾತಿಗಾಗಿ	ಷರಾ
1	2018-19	5	0	5	5	0	0	0	0	ಉಪವಿಭಾಗ ಮಟ್ಟದ ಸಮಿತಯಲ್ಲಿ ತೀರ್ಮಾನವಾಗುವ ಪ್ರತಿ ಅರ್ಹ ಪ್ರಕರಣಕ್ಕೆ ರೂ.5.00 ಲಕ್ಷ ಪರಿಹಾರಧನವನ್ನು ವಿತರಿಸಲಾಗುತ್ತಿದ್ದು, 2020-21 ನೇ ಸಾಲಿನಿಂದ ರೈತ ಆತ್ಮಹತ್ಯೆ ಪ್ರಕರಣಗಳಿಗೆ ಪರಿಹಾರ ನೀಡುವ ಕಾರ್ಯಕ್ರಮವು ಕಂದಾಯ ಇಲಾಖೆಗೆ ವರ್ಗಾವಣೆಗೊಂಡಿರುತ್ತದೆ.
2	2019-20	3	2	1	1	0	0	0	0	
3	2020-21	4	1	3	3	0	0	0	0	
4	**ಒಟ್ಟು**	**12**	**3**	**9**	**9**	**0**	**0**	**0**	**0**	

ಕೃಷಿ ನಿರ್ದೇಶಕರು

ಅನುಬಂಧ- ಎ

(LCQ 2171)

2021-22ನೇ ಸಾಲಿನಲ್ಲಿ ವಿವಿಧ ಬೆಳೆಗಳಿಗೆ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ವಿವರ

ಕ್ರ.ಸಂ.	ಬೆಳೆ	ಬೆಂಬಲ ಬೆಲೆ (ಪ್ರತಿ ಕ್ವಿಂಟಾಲ್ ಗೆ ರೂ.ಗಳಲ್ಲಿ)
ಮುಂಗಾರು ಹಂಗಾಮಿನ ಬೆಳೆಗಳು:		
1	ಭತ್ತ- ಸಾಮಾನ್ಯ	1940-00
	ಭತ್ತ- ಗ್ರೇಡ್ 'ಎ'	1960-00
2	ಮುಸುಕಿನ ಜೋಳ	1870-00
3	ಹೈಬ್ರಿಡ್ ಜೋಳ	2738-00
	ಬಿಳಿ ಜೋಳ (ಮಾಲ್ದಂಡಿ)	2758-00
4	ರಾಗಿ	3377-00
5	ಸಜ್ಜೆ	2250-00
6	ಉದ್ದು	6300-00
7	ಹೆಸರು	7275-00
8	ತೊಗರಿ	6300-00
9	ಶೇಂಗಾ	5550-00
10	ಸೂರ್ಯಕಾಂತಿ	6015-00
11	ಸೋಯಾಬೀನ್ (ಹಳದಿ)	3950-00
12	ಎಳ್ಳು	7307-00
13	ಹುಚ್ಚೆಳ್ಳು	6930-00
14	ಹತ್ತಿ- ಮೀಡಿಯಮ್ ಸ್ಟೇಪಲ್ ಲೆನ್ತ್ 24.5-25.5 ಮಿ.ಮೀ. ಹತ್ತಿ- ಲಾಂಗ್ ಸ್ಟೇಪಲ್ ಲೆನ್ತ್ 29.5-30.5 ಮಿ.ಮೀ.	5726-00 6025-00
ಹಿಂಗಾರು ಹಂಗಾಮಿನ ಬೆಳೆಗಳು:		
1	ಗೋಧಿ	2015-00
2	ಬಾರ್ಲಿ	1635-00
3	ಕಡಲೆ	5230-00
4	ಮಸೂರ	5500-00
5	ಸಾಸುವೆ	5050-00
6	ಕುಸುಬೆ	5441-00
ಕೊಬ್ಬರಿ (2022 ಸಾಲು)		
ಉಂಡೆ ಕೊಬ್ಬರಿ		11000-00
ಎಣ್ಣೆ ಕೊಬ್ಬರಿ		10590-00

ಕೃಷಿ ನಿರ್ದೇಶಕರು